# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 849 |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು |
| ಉತ್ತರಿಸುವ ದಿನಾಂಕ | : | 14-07-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಇಲಾಖೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ "ವಿದ್ಯಾರ್ಥಿನಿಲಯ" ಎಂ ಬ ಹೊಸ ಯೋಜನೆಯಡಿ ರಾಜ್ಯದ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1000 ಸಾಮರ್ಥ್ಯದ ಬಹುಮಹಡಿಯ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು ರೂ.250 ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ಮಿಸುವ ಯೋಜನೆಯು ಯಾವ ಹಂತದಲ್ಲಿ ಮತ್ತು ಯಾವ ಯಾವ ನಗರದಲ್ಲಿ ಸಮುಚ್ಚಯ ನಿರ್ಮಾಣ ಕಾರ್ಯವು ಪ್ರಾರಂಭಗೊಂಡಿದ್ದು; ಇದುವರೆಗೂ ಇದಕ್ಕಾಗಿ ಬಿಡುಗಡೆಗೊಳಿಸಿದ ಮೊತ್ತವೆಷ್ಟು ಮತ್ತು ಖರ್ಚು ಮಾಡಿರುವ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | 2022-23ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ ಸಂಖ್ಯೆ-154ರಲ್ಲಿ "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಇತರೆ ವರ್ಗದ ಮಕ್ಕಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಮೊಟ್ಟ ಮೊದಲ ಬಾರಿಗೆ "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ" ಎಂಬ ಯೋಜನೆಯಡಿ ರಾಜ್ಯದ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ಸಾಮರ್ಥ್ಯದ ಬಹುಮಹಡಿಯ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು 250 ಕೋಟಿ ರೂ.ಗಳ ಮೊತ್ತದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>ಅದರನ್ವಯ, ಸದರಿ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು ನಿರ್ಮಾಣ ಮಾಡಲು ಸಂಬಂಧಪಟ್ಟ ನಗರಗಳಲ್ಲಿನ ವಿಶ್ವವಿದ್ಯಾಲಯಗಳು ಅಗತ್ಯ ನಿವೇಶನವನ್ನು ಒದಗಿಸಿದ್ದು, ಸದರಿ ನಿವೇಶನದಲ್ಲಿ ಮೇಲ್ಕಂಡ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಯ ಆದೇಶಸಂ: ಪಿಡಬ್ಲ್ಯುಡಿ-26: ಆರ್‌ಡಿಎಫ್-2022, ದಿ:15-12-2022ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಸದರಿ ಕಾಮಗಾರಿಗಳ ಪ್ರಗತಿ ವಿವರ ಈ ಕೆಳಕಂಡಂತಿದೆ. |

<table>
<tr>
<td></td>
<td></td>
<td>
<table>
<tr><th>ನಗರ</th><th>ವಿಶ್ವವಿದ್ಯಾಲಯ</th><th>ಕಾಮಗಾರಿಗಳ ಪ್ರಸ್ತುತ ಹಂತ</th><th>ನಿರ್ವಹಣಾ ಇಲಾಖೆ</th></tr>
<tr><td>ಕಲಬುರಗಿ</td><td>ಗುಲ್ಬರ್ಗಾ ವಿಶ್ವವಿದ್ಯಾಲಯ</td><td>ಕಾಮಗಾರಿ ಪ್ರಾರಂಭಿಸಬೇಕಾಗಿದೆ.</td><td rowspan="2">ಸಮಾಜ ಕಲ್ಯಾಣ ಇಲಾಖೆ</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>ಕರ್ನಾಟಕ ವಿಶ್ವವಿದ್ಯಾಲಯ</td><td>ಕಾಮಗಾರಿ ಪ್ರಾರಂಭಿಸಬೇಕಾಗಿದೆ.</td></tr>
<tr><td>ಬೆಳಗಾವಿ</td><td>ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ</td><td>ಪಾಯದ ಕಾಮಗಾರಿ ಪ್ರಗತಿಯಲ್ಲಿದೆ.</td><td rowspan="2">ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ</td></tr>
<tr><td>ಮಂಗಳೂರು</td><td>ಮಂಗಳೂರು ವಿಶ್ವವಿದ್ಯಾಲಯ</td><td>ಕಾಮಗಾರಿಯು ಪ್ರಗತಿಯಲ್ಲಿದೆ.</td></tr>
<tr><td>ಮೈಸೂರು</td><td>ಮೈಸೂರು ವಿಶ್ವವಿದ್ಯಾಲಯ</td><td>ತಳಪಾಯ ಕಾಮಗಾರಿ ಮುಗಿದಿದ್ದು, ಪಿಲ್ಲರ್ ಕಾಮಗಾರಿ ಪ್ರಗತಿಯಲ್ಲಿದೆ.</td><td>ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ</td></tr>
</table>
ಸದರಿ ವಿದ್ಯಾರ್ಥಿನಿಲಯ ಸಮುಚ್ಚಯಗಳ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರೂ.63.00 ಕೋಟಿಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ
</td>
</tr>
<tr>
<td>ಆ)</td>
<td>ರಾಜ್ಯದಲ್ಲಿ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವ ಧ್ಯೇಯದಿಂದ ರಾಜ್ಯಾದ್ಯಂತ ಜಾಗೃತಿ ಮೂಡಿಸಲು "ವಿನಯ ಸಾಮರಸ್ಯ ಯೋಜನೆ" ಯನ್ನು ಜಾರಿಗೊಳಿಸುವ</td>
<td>ರಾಜ್ಯದಲ್ಲಿ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವ ಸಂಬಂಧವಾಗಿ "ವಿನಯ ಸಾಮರಸ್ಯ ಯೋಜನೆ" ಯನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಮಾಡಲು ದಿನಾಂಕ:23-03-2023 ರಂದು ಕ್ರಮ ಕೈಗೊಳ್ಳಲಾಗಿದೆ.</td>
</tr>
</table>

---3

| | | |
|---|---|---|
| | ಯೋಜನೆಯು ಯಾವ ಹಂತದಲ್ಲಿದೆ ಮತ್ತು ಈ ಯೋಜನೆಯ ಅನುಷ್ಠಾನಕ್ಕಾಗಿ ಇದುವರೆಗೂ ಮೀಸಲಿಟ್ಟಿರುವ ಅನುದಾನವೆಷ್ಟು; ಬಿಡುಗಡೆಗೊಳಿಸಿದ ಅನುದಾನವೆಷ್ಟು ಮತ್ತು ಖರ್ಚು ಮಾಡಿರುವ ಅನುದಾನವೆಷ್ಟು? (ಮಾಹಿತಿ ನೀಡುವುದು) | ಸದರಿ ಯೋಜನೆ ಅನುಷ್ಠಾನಕ್ಕಾಗಿ ರೂ.5.00 ಕೋಟಿ ಅನುದಾನ ಒದಗಿಸಲಾಗಿದೆ. ಅದರಲ್ಲಿ ರೂ.3.75 ಕೋಟಿಗಳ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಇನ್ನೂ ಉಳಿದ ರೂ.1.25 ಕೋಟಿ ಅನುದಾನವನ್ನು ಹಂತ ಹಂತವಾಗಿ ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ). |

**ಸಕಇ 241 ಎಸ್‌ಎಲ್‌ಪಿ 2023**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಇಲಾಖೆ ಸಚಿವರು**

**SOCIAL WELFARE DEPARTMENT**

**DETAILS TO JOINT ACCOUNTS OF DC & DSWO**

## ವಿನಯ ಸಾಮರಸ್ಯ ಯೋಜನೆಯಡಿಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನದ ವಿವರ

| SL NO | NAME | DISTRICT NAME | AMOUNT |
|---|---|---|---|
| 1 | DC & DSWO | BANGALORE URBAN | 15.00 |
| 2 | DC & DSWO | BANGALORE RURAL | 15.00 |
| 3 | DC & DSWO | CHITRADURGA | 10.00 |
| 4 | DC & DSWO | DAVANAGERE | 10.00 |
| 5 | DC & DSWO | KOLAR | 15.00 |
| 6 | DC & DSWO | TUMKUR | 15.00 |
| 7 | DC & DSWO | RAMNAGAR | 10.00 |
| 8 | DC & DSWO | CHIKKABALLAPUR | 15.00 |
| 9 | DC & DSWO | SHIMOGA | 10.00 |
| 10 | DC & DSWO | MYSORE | 15.00 |
| 11 | DC & DSWO | CHAMARAJNAGAR | 15.00 |
| 12 | DC & DSWO | MANDYA | 10.00 |
| 13 | DC & DSWO | HASSAN | 10.00 |
| 14 | DC & DSWO | CHIKMAGALORE | 10.00 |
| 15 | DC & DSWO | KODAGU | 10.00 |
| 16 | DC & DSWO | DAKSHINA KANNADA | 10.00 |
| 17 | DC & DSWO | UDUPI | 10.00 |
| 18 | DC & DSWO | BELGAUM | 15.00 |
| 19 | DC & DSWO | BIJAPUR | 15.00 |
| 20 | DC & DSWO | BAGALAKOTE | 10.00 |
| 21 | DC & DSWO | DHARWAD | 15.00 |
| 22 | DC & DSWO | GADAG | 10.00 |
| 23 | DC & DSWO | HAVERI | 10.00 |
| 24 | DC & DSWO | UTTAR KANADA | 10.00 |
| 25 | DC & DSWO | GULBARGA | 15.00 |
| 26 | DC & DSWO | RAICHUR | 15.00 |
| 27 | DC & DSWO | KOPPAL | 15.00 |
| 28 | DC & DSWO | BELLARY | 10.00 |
| 29 | DC & DSWO | BIDAR | 10.00 |
| 30 | DC & DSWO | YADGIR | 10.00 |
| 31 | DC & DSWO | VIJAYANAGAR | 10.00 |
| | | **Total:** | **375.00** |

(ರೂಪಾಯಿ ಮೂರು ಕೋಟಿ ಎಪ್ಪತ್ತೈದು ಲಕ್ಷಗಳು ಮಾತ್ರ)